## ಸೂಕ್ತಿಪ್ರಭ

☛ **ನಿಜವಾದ** ಸ್ನೇಹವು ಉತ್ತಮ ಆರೋಗ್ಯದಂತೆ ಜೀವನಕ್ಕೆ ಪೂರಕ. —ಕಾಟನ್

☛ **ಸ್ನೇಹಿತನನ್ನು** ಪಡೆದುಕೊಳ್ಳುವುದಕ್ಕೆ ಒಂದೇ ಒಂದು ಮಾರ್ಗ ವಿದೆ. ನಾವು ಮೊದಲು ಸ್ನೇಹಿತರಾಗಬೇಕು. —ಎಮರ್‌ಸನ್

☛ **ಸ್ನೇಹ** ಬೆಳೆಸುವಲ್ಲಿ ಮತ್ತು ಸ್ನೇಹಿತರ ಆಯ್ಕೆಯಲ್ಲಿ ನಿಧಾನ ವಿರಲಿ. ಆದರೆ ಬದಲಾಯಿಸುವಾಗ ಮತ್ತಷ್ಟು ನಿಧಾನತೆಯಿರಲಿ. —ಫ್ರಾಂಕ್ಲಿನ್

☛ **ಅತ್ಯಂತ** ಪ್ರೀತಿಪಾತ್ರನೂ, ಅತ್ಯುತ್ತಮನೂ, ಸದಾ ಒಳಿತನ್ನೇ ಬಯಸುವವನೂ ಆದ ಒಬ್ಬನೇ ಒಬ್ಬ ನಿಜವಾದ ಸ್ನೇಹಿತ ನೆಂದರೆ— ದೇವರು. ಸದಾ ಅವನ ಸಾನ್ನಿಧ್ಯವನ್ನು ಬಯಸುವುದೇ ಉತ್ತಮ. —ವಿ.ಕೆ. ಶರ್ಮಾ

☛ **ಸ್ನೇಹಿತನನ್ನು** ಉಳಿಸಿಕೊಳ್ಳಬೇಕಾದರೆ ಅವನನ್ನು ದುರ್ಬೀನಿ ನೊಂದಿಗೆ ಬಳಿಸಾರು, ಸೂಕ್ಷ್ಮದರ್ಶಕದೊಂದಿಗೆ ಹೋಗಬೇಡ. —ಅಜ್ಞಾತ

☛ **ಕೇವಲ** ಭಗವಂತನೊಬ್ಬನೇ ಕಡೆಯ ದಿನದ ತನಕ ಮನುಷ್ಯನ ಕುರಿತು ತೀರ್ಮಾನಿಸುವುದಿಲ್ಲ. —ಡಾ. ಜಾನ್‌ಸನ್

☛ **ಉಪಕಾರ** ಮಾಡುವುದರಿಂದ ಸಾಮಾನ್ಯ ಜನರ ಸ್ನೇಹವನ್ನು ಗಳಿಸಬಹುದು. ಪ್ರಾಣಿಗಳ ಮತ್ತು ಪಕ್ಷಿಗಳ ಸ್ನೇಹವನ್ನೂ ಹೇಗಾದರೂ ಗಳಿಸಬಹುದು. ಮೂರ್ಖರ ಸ್ನೇಹವನ್ನು ಭಯದಿಂದಲೋ, ಆಸೆಗಳಿಂದಲೋ ಗಳಿಸಬಹುದು. ಸಜ್ಜನರ ಸ್ನೇಹವು ಕಾರಣವಿಲ್ಲದೆ, ದರ್ಶನ ಮಾತ್ರದಿಂದಲೇ ಲಭಿಸುವುದು. —ಪಂಚತಂತ್ರ

☛ **ಸಕಲ** ಪ್ರಾಣಿಗಳಲ್ಲಿಯೂ, ಸ್ನೇಹಭಾವ, ದಾನ, ಮಧುರ ವಾದ ನುಡಿ—ಇವುಗಳಿಗೆ ಸಮಾನವಾದ, ಸಂತೋಷಜನಕ ಉತ್ತಮಗುಣವು ಮೂರು ಲೋಕಗಳಲ್ಲಿಯೂ ಇಲ್ಲ. —ಸುಭಾಷಿತ

☛ **ಆನೆಯು** ಮೊದಲು ಸ್ನಾನ ಮಾಡಿ ಆಮೇಲೆ ಸೊಂಡಿಲಿ ನಿಂದ ಧೂಳೆರಚಿಕೊಂಡು ತನ್ನ ಮೈಯನ್ನು ಹೇಗೆ ಕೊಳೆಮಾಡಿ ಕೊಳ್ಳುವುದೋ, ಹಾಗೆಯೇ ದುಷ್ಟರು ತಾವಾಗಿಯೇ ಬೆಳೆಸಿಕೊಂಡ ಸ್ನೇಹವನ್ನು ತಾವೇ ಕೆಡಿಸಿಕೊಳ್ಳುತ್ತಾರೆ. —ರಾಮಾಯಣ

☛ **ಪರಸ್ಪರ** ಪ್ರೀತಿಯಿಂದ ಸುಖವು ಹೆಚ್ಚುತ್ತದೆ. ಎಷ್ಟೇ ಚಾಣಾಕ್ಷತನದಿಂದ ಕೂಡಿದ್ದರೂ ದ್ವೇಷ ಎಂದಿಗೂ ಸುಖಕ್ಕೆ ಕಾರಣವಾಗಲಾರದು. —ರಾಜಾಜಿ

☛ **ಬಡವರ** ಬಗ್ಗೆ ಮಾತನಾಡುವುದು ಇಂದಿನ ದಿನಗಳ ಫ್ಯಾಷನ್ ಆಗಿದೆ. ಆದರೆ ಬಡವರೊಂದಿಗೆ ಮಾತನಾಡುವುದು ಮಾತ್ರ ಇವರುಗಳಿಗೆ ಬೇಕಿಲ್ಲವಾಗಿದೆ. —ಮದರ್ ಥೆರೆಸಾ

☛ **ಹಿಂಜರಿಯದೆ** ಕೊಡುವುದನ್ನು ಕಲಿಯಬೇಕು. ಕಳೆದು ಹೋದದನ್ನು ಕುರಿತು ಶೋಚಿಸದಿರಲು ತಿಳಿದಿರಬೇಕು. ಮೋಸ ವಂಚನೆಗಳಿಲ್ಲದೆ ಗಳಿಸಲು ಪ್ರಯತ್ನಿಸಬೇಕು. —ಅನಾಮಿಕ

## ಪ್ರಾರ್ಥನೆ

### ರಕ್ಷಿಸು ಕರ್ನಾಟಕ ದೇವಿ

ರಕ್ಷಿಸು ಕರ್ನಾಟಕ ದೇವಿ ಸಂ
ರಕ್ಷಿಸು ಕರ್ನಾಟಕ ದೇವೀ ॥ ಪ ॥

ಕದಂಬಾದಿ ಸಂಪೂಜಿತ ಚರಣೆ
ಗಂಗಾರಾಧಿತ ಪದನಖ ಸರಣೆ
ಚಲುಕ್ಯರುತ್ತಮ ಕಾಂಚೀಕಿರಣೆ
ರಾಷ್ಟ್ರಕೂಟ ಮಣಿಕಂಠಾಭರಣೆ
ಚಾಲುಕ್ಯಾಂಶುಕ ಶೋಭಾವರಣೆ ॥ ೧ ॥

ಯಾದವ ಮಣಿ ಕಂಕಣಾಂಶು ಸುಂದರಿ
ಬಲ್ಲಾಳರ ಭುಜಭೂಷಣ ಬಂಧುರೆ
ವಿಜಯನಗರ ಮಂಗಲಮಣಿ ಕಂಧರೆ
ಮೈಸೂರೊಡೆಯರ ಸುಕೀರ್ತಿ ಮಂದಿರೆ
ಮಾಂಡಲಿಕಾವನ ಭಾರಧುರಂಧರೆ ॥ ೨ ॥

ಮತ ಸಂಸ್ಥಾಪಕ ಸ್ಥಾಪಿತಪ್ರಾಣೆ
ಶಿಲ್ಪಕಲಾ ಮಂಟಪ ಸುಸ್ಥಾನೆ
ಕವಿಜನ ಕೀರ್ತಿತ ಸುಯಶಸ್ತ್ರಾಣೆ
ಸಾಧು ಸತ್ಕಥಾ ಭೇರೀಧ್ವಾನೆ
ಸ್ವೇತಿಹಾಸನೀರಾಜನ ರಾಣಿ ॥ ೩ ॥

—ಶಾಂತಕವಿ (ಬಾಳಾಚಾರ್ಯ ಸಕ್ಕರಿ)
(ಕ್ರಿ.ಶ.೧೮೫೬–೧೯೨೦)